# ಸಂತೋಷಕ್ಕೆ ಹಣ ಮಾನದಂಡ ಅಲ್ಲ

**ಮೈಕೋ ಮಂಜು**
**ಉದಯದ 'ಕನ್ಯಾದಾನ'ದ ಅಶ್ವತ್ಥನಾರಾಯಣ**



◆ **ಹವ್ಯಾಸಿ ರಂಗಭೂಮಿಯಿಂದ ವೃತ್ತಿಪರ ನಟನಾಗಿ ಬೆಳೆದದ್ದು ಹೇಗೆ?**

ಮೈಕೋದಲ್ಲಿ ಕೆಲಸ ಮಾಡುತ್ತಿದ್ದೆ. ಆಗ ಮೈಕೋ ಲಲಿತಕಲಾ ಸಂಘದಲ್ಲಿ ಸಕ್ರಿಯನಾಗಿದ್ದೆ. ಅನಿವಾರ್ಯವಾಗಿ ಕೆಲಸ ಬಿಡಬೇಕಾದ ಸಂದರ್ಭ ಬಂತು. ಅದು ನಟನೆಯನ್ನೇ ವೃತ್ತಿಯನ್ನಾಗಿ ಸ್ವೀಕರಿಸುವ ಅಗತ್ಯವನ್ನು ಸೃಷ್ಟಿಸಿತು.

◆ **ಕಾರ್ಖಾನೆಗಳಲ್ಲಿ ರಂಗಚಟುವಟಿಕೆ ಈಗ ಹೇಗಿದೆ?**

ಕಂಪನಿಗಳ ನಾಟಕದಂತೆಯೇ ಕಾರ್ಖಾನೆಗಳ ನಾಟಕಗಳ ಸ್ಥಿತಿ. ಜಾಗತಿಕರಣದ ಪರಿಣಾಮ ಬೇರೆ ಬೇರೆ ದೇಶಗಳ ಹೂಡಿಕೆದಾರರು ಇಲ್ಲಿಗೆ ಬಂದಿದ್ದಾರೆ. ಅವರಿಗೆ ನೆಲ ಮೂಲದ ಕಲೆಯ ಪ್ರೋತ್ಸಾಹಿಸಬೇಕಾದ ಅಗತ್ಯ ಇಲ್ಲ. ಅವರ ಮನೋರಂಜನಾ ಮಾದರಿಯೂ ಭಿನ್ನವಾಗಿದೆ. ಬಹುತೇಕ ಸಾರ್ವಜನಿಕ ಸ್ವಾಮ್ಯದ ಕಾರ್ಖಾನೆಗಳ ಸ್ಥಿತಿ ಆಶಾದಾಯಕವಾಗಿಲ್ಲ. ಮೈಕೋದ ಕಲಾವಿದನಾಗಿ ಹೆಚ್ಚುಕಡಿಮೆ ಕೊನೆಯ ತಲೆಮಾರಿಗೆ ಸೇರುತ್ತೇನೆ. ಕೆಲಸ ಬಿಡುವ ಹೊತ್ತಿಗೆ ಆಗಲೇ ರಂಗಭೂಮಿ ಚಟುವಟಿಕೆ ಕಡಿಮೆ ಆಗಿತ್ತು. ಕೆಲಸಕ್ಕೆ ಸೇರಿದ ಆರಂಭದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ನಾಟಕ ಪ್ರದರ್ಶನ ಮಾಡುತ್ತಿದ್ದೆವು. ಅದರ ಖರ್ಚು ವೆಚ್ಚವನ್ನು ಕಂಪನಿಯೇ ಬರಿಸುತ್ತಿತ್ತು. ಆಧುನಿಕ ಕಂಪನಿಗಳಲ್ಲಿ ಇಂತಹ ವ್ಯವಸ್ಥೆ ಇಲ್ಲ. ಆದರೆ ನಟನೆಯ ಪ್ಯಾಶನ್ ಇರುವವರು ತಮ್ಮ ಉದ್ಯೋಗವನ್ನು ಬಿಟ್ಟು ಬಂದಿದ್ದಾರೆ. ನಾವೆಲ್ಲ ರಂಗಭೂಮಿಯನ್ನು ನಟನಾ ಪ್ರೀತಿಯಿಂದಲೇ ಮಾಡಿದ್ದು ಸೀರಿಯಲ್– ಸಿನಿಮಾ ಉದ್ದೇಶ ನಮಗೆ ಇರಲಿಲ್ಲ.

◆ **ನಾನೂ ನಟ ಆಗಬೇಕೆಂದರೆ ಹೇಗೆ ತಯಾರಿ ಆಗಬೇಕು?**

ಎರಡು ಸೀರಿಯಲ್ ಮಾಡಿ ಹೋಗುತ್ತೇನೆ ಎನ್ನುವವರಿಗೆ ಹಲವು ದಾರಿಗಳಿವೆ. ಇಲ್ಲೇ ನೆಲೆ ಊರುತ್ತೇನೆ ಎನ್ನುವುದಾದರೆ ರಂಗಭೂಮಿಯಲ್ಲಿ ಸ್ವಲ್ಪ ಕೆಲಸ ಮಾಡುವುದು ಒಳ್ಳೆಯದು. ಏಕೆಂದರೆ ಒಂದು ನಾಟಕದಲ್ಲಿ 20 ಪಾತ್ರಗಳು ಇವೆ ಎಂದುಕೊಳ್ಳೋಣ. ಆ ಒಂದು ನಾಟಕವನ್ನು ಪ್ರದರ್ಶನ ಮಾಡಲು ಒಂದೆರಡು ತಿಂಗಳು ತಾಲೀಮು ಮಾಡುತ್ತೇವೆ. ಆಗ ಒಬ್ಬ ನಟನಿಗೆ ಎಲ್ಲ ಪಾತ್ರಗಳ ಪರಿಚಯ ಆಗುತ್ತದೆ. ಆ ಎಲ್ಲ ವ್ಯಕ್ತಿತ್ವಗಳನ್ನು ನಿರ್ದೇಶಕ ತಿದ್ದುತ್ತಿರುತ್ತಾನೆ. ಅವುಗಳ ಬೆಳವಣಿಗೆ ಮತ್ತು ಪೋಷಣೆಯಲ್ಲಿ ಎಲ್ಲರೂ ಭಾಗಿಗಳಾಗಿರುತ್ತೇವೆ. ನನ್ನ ಪಾತ್ರ ಮಾತ್ರ ಅಲ್ಲದೆ ಬೇರೆ ಬೇರೆ ಪಾತ್ರಗಳನ್ನು ನೋಡಿಕೊಳ್ಳುವ ಅವಕಾಶ ಸಿಗುತ್ತದೆ. ಮುಂದೊಂದು ದಿನ ಧಾರಾವಾಹಿಯಲ್ಲಿ ಅಂತಹ ಇಪ್ಪತ್ತು ಪಾತ್ರಗಳಲ್ಲಿ ಒಂದೊಂದು ಬೇರೆ ಬೇರೆ ಸಂದರ್ಭದಲ್ಲಿ ಸಿಗಬಹುದು. ಹಲವು ವರ್ಷಗಳ ಹಿಂದಿನ ಅನುಭವವೂ ಇಂತಹ ಸಂದರ್ಭದಲ್ಲಿ ಸಹಾಯಕ್ಕೆ ಬರುತ್ತದೆ. ಯಾವುದೇ ಪಾತ್ರವನ್ನಾದರೂ ರಂಗಭೂಮಿ ಕಲಾವಿದ ಚೆನ್ನಾಗಿ ಪೋಷಿಸುತ್ತಾನೆ ಅಂದರೆ ಅದಕ್ಕೆ ಇದೇ ಕಾರಣ.

ಪರಿಚಯ ಇಲ್ಲವೇ ಸಂಪರ್ಕದ ಸಾಧನದಿಂದ ಬಂದರೆ ನೆಲೆನಿಲ್ಲುವುದು ಕಷ್ಟ. ಒಂದೆರಡು ಅವಕಾಶಗಳು ಹಾಗೆ ಸಿಗಬಹುದು. ಅವರಿಗೆ ಪಾತ್ರ ಪೋಷಣೆ ಮಾಡಲು ಕಷ್ಟ ಆಗಬಹುದು. ಹಾಗೆಂದು ಈ ಮಾತನ್ನು ಎಲ್ಲರಿಗೂ ಅನ್ವಯ ಆಗುತ್ತದೆ ಎಂದೇನೂ ಇಲ್ಲ. ನೆಲೆ ನಿಂತ ಬಹುತೇಕ ಕಲಾವಿದರು ರಂಗಭೂಮಿ ಹಿನ್ನೆಲೆಯಿಂದ ಬಂದವರೇ ಆಗಿದ್ದಾರೆ. ರಂಗಭೂಮಿ ಇಲ್ಲದೆ ನಟನೆ ಮಾಡಲು ಸಾಧ್ಯ ಇಲ್ಲವೇ ಇಲ್ಲ ಎಂದೂ ಅರ್ಥ ಅಲ್ಲ. ಕಷ್ಟಪಟ್ಟು ಕಲಿತು ಬೆಳೆದವರೂ ಇದ್ದಾರೆ.

◆ **ಧಾರಾವಾಹಿಗಳದ್ದೆಲ್ಲಾ ಅದೇ ಗೋಳು ಎನ್ನುವ ಮಾತು ವೀಕ್ಷಕರಲ್ಲಿ ಇದೆ ಇದು ಏಕೆ ಹೀಗೆ?**

ಯಾವುದೇ ಕಲೆಯಾದರೂ ಅದು ತನ್ನ ಅಂತರ್ಯದಲ್ಲಿ ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡಿರಬೇಕು. ಮೊದಲೆಲ್ಲ ಐತಿಹಾಸಿಕ ಕಥೆಗಳು ಇದ್ದವು. ರಾಜ್‌ಕುಮಾರ್ ಅವರ 'ಬಂಗಾರದ ಮನುಷ್ಯ' ಸಮಾಜದಲ್ಲಿ ಹೊಸ ಚಿಂತನೆಯನ್ನೇ ಹುಟ್ಟಿಸಿತು. ಮೊದಲು ಧಾರಾವಾಹಿಗಳೂ ಹಾಗೆಯೇ ಇದ್ದವು. ಈಗ ಏಕರೂಪತೆಯ ಕಥೆಯ ಛಾಯೆ ಇರುವುದರಿಂದ ಹೀಗೆ ಆಗುತ್ತಿರಬಹುದು. ಆದರೂ ಅಂತಹ ಕಥೆಯನ್ನೇ ಮೆಚ್ಚುತ್ತಲೇ ಅವುಗಳನ್ನು ಬೈಯುವ ಕೆಲಸವನ್ನೂ ವೀಕ್ಷಕರೇ ಮಾಡುತ್ತಿದ್ದಾರೆ. ಬೈದುಕೊಳ್ಳುತ್ತಾ ಅದನ್ನೇ ಬಯಸುತ್ತಾ ನೋಡುತ್ತಾರೆ. ನಿಜಕ್ಕೂ ಇಷ್ಟ ಇಲ್ಲ ಎನ್ನುವುದಾದರೆ ಅದನ್ನು ನೋಡುವುದನ್ನು ಬಿಟ್ಟರೆ ಆಗ ಆ ಜಾಗದಲ್ಲಿ ಬೇರೆ ಧಾರಾವಾಹಿ ಬರುತ್ತದೆ. ಒಂದು ಕಥೆ ಕ್ಲಿಕ್ ಆದರೆ ಅದನ್ನು ಅನುಸರಿಸುವುದರಿಂದ ಹೀಗಾಗುತ್ತದೆ. ಇತ್ತೀಚೆಗೆ ಹೊಸ ಬಗೆಯ ಪ್ರಯೋಗಗಳು ಧಾರಾವಾಹಿಯಲ್ಲೂ ಆರಂಭವಾಗಿದೆ.

◆ **'ಕನ್ಯಾದಾನ'ದ ಕಥೆಯ ಬಗ್ಗೆ ಹೇಳುವುದಾದರೆ...**

ಐದು ಹೆಣ್ಣುಮಕ್ಕಳ ತಂದೆ. ತಾಯಿ ಇಲ್ಲದ ಅವರನ್ನು ಏಕ ಪೋಷಕನಾಗಿ ಸಮಾನ ಪ್ರೀತಿಯಿಂದ ಸಾಕುವುದು ನನ್ನ ಪಾತ್ರದ ಹೊಣೆ. ನನ್ನ ಮಕ್ಕಳು ಹೋದ ಮನೆಯಲ್ಲಿ ಚೆನ್ನಾಗಿ ಬದುಕಬೇಕು ಎನ್ನುವ ಕನಸು ನನ್ನದು. ಅವರಿಗೆ ಚಿಂತೆ ಇರಬಾರದು. ಈಗ ನಮಗೆ ಬಡತನ ಇದ್ದರೂ ಖುಷಿ ಆಗಿಯೇ ಇದ್ದವೆ. ಅಯ್ಯೋ ಪಾಪ ಎಂದು ಕನಿಕರ ಪಡುವ ಬಾಳು ನಮ್ಮದಲ್ಲ. ಆದರ್ಶದ ಬದುಕಿಗೆ ಆರ್ಥಿಕತೆ ಮಾನದಂಡ ಅಲ್ಲ. ಎಲ್ಲ ಮಕ್ಕಳನ್ನು ತುಂಬ ಪ್ರೀತಿಸುತ್ತೇನೆ. ಎಲ್ಲರನ್ನೂ ಸ್ವಾವಲಂಬಿಗಳನ್ನಾಗಿ ರೂಪಿಸುವ ವಿಶ್ವಾಸ ಇದೆ.

**■ ರಾಘವೇಂದ್ರ ಕೆ.**